# ಕರ್ನಾಟಕ ಸರ್ಕಾರ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1.

ಸಿ8(5)ಶಾ.ಶಿ.ಅ.ಸೀ.ಅ.6/2006-07 ದಿನಾಂಕ :19-07-2006

## ಸುತ್ತೋಲೆ

ವಿಷಯ: ಖಾಸಗಿ ಅನುದಾನಿತ ಪ್ರೌಢಶಾಲೆಗಳ್ಲಿನ ಖಾಲಿ /ಇರುವ ಬೋಧಕ ಹುದ್ದೆಗಳನ್ನು ತುಂಬಲು ಹಾಲಿ ಇರುವ ನಿರ್ಬಂಧವನ್ನು ಸಡಿಲಿಸಿರುವ ಬಗ್ಗೆ.

ಉಲ್ಲೇಖ: 1] ಸರ್ಕಾರಿ ಆದೇಶ ಸಂಖ್ಯೆ ಇಡಿ 46 ಎಸ್.ಇ.ಪಿ. 2006 ದಿನಾಂಕ 12-04-2006 ಮತ್ತು ದಿನಾಂಕ 19-6-2006

2] ಈ ಕಛೇರಿ ಪತ್ರದ ಸಂಖ್ಯೆ ಸಿ8(5) ಶಾಶಿಅ: ಖಾ.ಹು.ನೇ.ಅನು 01/06-07 ದಿ:02-05-06.

0-0-0-0-0

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರದ ಆದೇಶ ಸಂಖ್ಯೆ ಇಡಿ 46 ಎಸ್.ಇ.ಪಿ. 2006 ದಿನಾಂಕ 12-04-2006ರ ಆದೇಶದಲ್ಲಿ ಹುದ್ದೆಗಳನ್ನು ತುಂಬಲು ಮತ್ತು ಅನುಮತಿ ನೀಡಲು ಹಾಗೂ ಅದರಂತೆ ಆದ ನೇಮಕಾತಿಗಳನ್ನು ಅನುದಾನ ಸಹಿತ ಅನುಮೋದನಾ ಪ್ರಾಧಿಕಾರವನ್ನು ದಿನಾಂಕ 19-06-2006ರ ಸ್ಪಷ್ಟೀಕರಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಯಾಯ ಆಯುಕ್ತರುಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಿರುತ್ತಾರೆ.

ಉಲ್ಲೇಖ 2ರ ಈ ಕಛೇರಿಯ ಪತ್ರದೊಂದಿಗೆ ನೀಡಿರುವ ಉಲ್ಲೇಖ (1)ರ ಸರ್ಕಾರದ ದಿನಾಂಕ 12-04-2006ರ ಆದೇಶದಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿಧನ, ನಿವೃತ್ತಿ, ರಾಜೀನಾಮೆ ಹಾಗೂ ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾದ ಬಡ್ತಿಯಿಂದ ಉಂಟಾದ ಒಟ್ಟು 2106 ಬೋಧಕ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡಲಾಗಿದೆ. ಹಾಗೂ ಅನುಮೋದಿಸುವ ವಿಧಿ ವಿಧಾನಗಳನ್ನು ಅನುಸರಿಸಲು ಆದೇಶದಲ್ಲಿ ತಿಳಿಸಲಾಗಿದೆ.

ಆದಾಗ್ಯೂ ಈಗಾಗಲೇ ಕೆಲವು ಉಪನಿರ್ದೇಶಕರುಗಳಿಂದ ನೇಮಕಾತಿ ಅನುಮತಿ ಹಾಗೂ ಅನುಮೋದನೆಗಾಗಿ ಬರುತ್ತಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ ಕೆಲವು ನ್ಯೂನತೆಗಳು ಕಂಡು ಬರುತ್ತಿದ್ದು, ಇದರಿಂದ ನೇಮಕಾತಿ ಅನುಮತಿ ಮತ್ತು ಅನುಮೋದನೆ ಕಡತಗಳು ವಿಳಂಬವಾಗುವ ಸಾಧ್ಯತೆಗಳು ಹೆಚ್ಚಾಗಿ ಕಂಡುಬರುತ್ತಿದೆ. ಆದ್ದರಿಂದ ಸರ್ಕಾರದ ಆದೇಶ ದಿನಾಂಕ 12-04-2006ರ ಮಾರ್ಗ ಸೂಚಿಗಳನ್ನು ಖಡ್ಡಾಯವಾಗಿ ಪಾಲಿಸುವ ಜೊತೆಗೆ ಈ ಕೆಳಕಂಡ ಸೂಚನೆಗಳನ್ನು ಸಹ ಗಮನಿಸುವುದು.

**ನೇಮಕಾತಿ ಅನುಮತಿಗೆ ಪ್ರಸ್ತಾವನೆಯನ್ನು ಕಳುಹಿಸುವಾಗ ಅನುಸರಿಸಬೇಕಾದ ಅಂಶಗಳು:-**

1. ಸರ್ಕಾರದ ಆದೇಶ ದಿನಾಂಕ 12-04-2006 ರೊಂದಿಗೆ ಲಗತ್ತಿಸಿರು ಅನುಬಂಧ-1ರ ಪಟ್ಟಿ ಹಾಗೂ 1 ಮತ್ತು 2ರಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ, ನಿಗಧಿಪಡಿಸಲಾದ ಅಂಶಗಳನ್ನು ಮೌಲ್ಯಮಾಪನ ಮಾಡಿ ಅದರಲ್ಲಿನ ಮಾನದಂಡಗಳನ್ನು ಪೂರೈಸಿರುವ ಬಗ್ಗೆ ಸ್ಪಷ್ಟವಾಗಿ ವರದಿಯಲ್ಲಿ ನಮೂದಿಸುವುದು.

2. ಮೀಸಲಾತಿ ಬಿಂದುಗಳನ್ನು ಕಟ್ಟು ನಿಟ್ಟಾಗಿ ಪಾಲಿಸಿ ಈಗಾಗಲೇ ನೇಮಕಾತಿ ಮಾಡಿಕೊಂಡಿರುವ ನೇಮಕಾತಿಯು ಯಾವ ಬಿಂದುವಿನವರೆಗೂ ನಿಂತಿದೆ. ಎಂಬುದನ್ನು ಖಚಿತಪಡಿಸಿಕೊಂಡು ಮುಂದಿನ ನೇಮಕಾತಿಯು ಯಾವ ರೋಸ್ಟರೆಗೆ ಅನ್ವಯಿಸುತ್ತದೆ ಎಂಬುವುದನ್ನು ಸ್ಪಷ್ಟವಾಗಿ ನಮೂದಿಸುವುದು.

3. ಸರ್ಕಾರದ ಆದೇಶ ದಿನಾಂಕ 12-04-2006ರಂದು ಸರ್ಕಾರ ಆದೇಶ ಹೊರಡಿಸಿದೆ ಅದರಂತೆ ದಿನಾಂಕ 12-04-2006ರ ಅಥವಾ ಅದಕ್ಕೆ ಪೂರ್ವದಲ್ಲಿ ಉದ್ಭವಿಸಿದ ಬೋಧಕ ಹುದ್ದೆಗಳನ್ನು ಮಾತ್ರ ತುಂಬಲು ಅನುಮತಿ ನೀಡಲಾಗುವುದು. ಸರ್ಕಾರದ ಆದೇಶದಲ್ಲಿ 2106 ಹುದ್ದೆಗಳನ್ನು ತುಂಬಲು ಅನುಮತಿ ನೀಡಿದೆ. ಅದರಂತೆ ದಿನಾಂಕ 17-01-2004ರ ಪೂರ್ವದ ನೇಮಕಾತಿ ಅನುಮೋದನೆ ಒಳಗೊಂಡಂತೆ ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಒಟ್ಟು 1145 ಹುದ್ದೆಗಳು, ಗುಲ್ಬರ್ಗಾ ವಿಭಾಗದಲ್ಲಿ ಒಟ್ಟು 249 ಹುದ್ದೆಗಳು ಹಾಗೂ ಧಾರವಾಡ ವಿಭಾಗದಲ್ಲಿ ಒಟ್ಟು 896 ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿದೆ. [ಪಟ್ಟಿ ಲಗತ್ತಿಸಿದೆ] ಈ ಹುದ್ದೆಗಳಿಗಿಂತ ಮೀರಿ ದಿನಾಂಕ 12-4-2006ರಿಂದ 31-05-2006ರ ವರೆಗೂ ಇರುವ ಖಾಲಿ ಹುದ್ದೆಗಳ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು [ವಿಷಯವಾರು] ಕೂಡಲೇ ಸಲ್ಲಿಸಿದಲ್ಲಿ ಸರ್ಕಾರಕ್ಕೆ ಅನುಮತಿಗಾಗಿ ಕೋರಲಾಗುವುದು.

**ನೇಮಕಾತಿ ಅನುಮೋದನೆಗಾಗಿ ಅನುಸರಿಸಬೇಕಾದ ಅಂಶಗಳು:-**

1. ಸರ್ಕಾರದ ಆದೇಶ ದಿನಾಂಕ 12-04-2006ರಲ್ಲಿನ ಎಲ್ಲಾ ಸೂಚನೆಗಳನ್ನು ಪಾಲಿಸಿ ಅನುಬಂಧ-2ರಲ್ಲಿನ ಎಲ್ಲಾ ಮಾಹಿತಿಗಳನ್ನು ಸ್ಪಷ್ಟವಾಗಿ ನಮೂದಿಸುವುದು, ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲುಗಳನ್ನು ದೃಢೀಕರಿಸಿ ಸಲ್ಲಿಸುವುದು. [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಹಾಗೂ ಸೇವಾ ಷರತ್ತು ಹಾಗೂ ನಿಬಂಧನೆಗಳು] ನಿಯಮಗಳು 99 ರಲ್ಲಿನ ಸಂಖ್ಯೆ ಇಡಿ 52 ವಿವಿಧ 99 ಬೆಂಗಳೂರು ದಿನಾಂಕ 02-02-2000ರಲ್ಲಿ [ ಅನುಬಂಧ-1] ತಿಳಿಸಿರುವಂತೆ ನೇಮಕಾತಿ ವಿಧಿ ವಿಧಾನಗಳನ್ನು ಕಡ್ಡಾಯವಾಗಿ ಅನುಸರಿಸುವಂತೆ ಆಡಳಿತ ಮಂಡಳಿಗೆ ತಿಳಿಸುವುದು.

2. ಈಗಾಗಲೇ ಉಪನಿರ್ದೇಶಕರಿಂದ ಅನುಮತಿ ಪಡೆದಿದ್ದು, ನೇಮಕಾತಿ ಅನುಮೋದನೆಗೆ ಸಲ್ಲಿಸುವ ಪ್ರಸ್ತಾವನೆಯೊಂದಿಗೆ ಅನುಬಂಧ-1 ರ ಪಟ್ಟಿ 1 ಮತ್ತು 2 ಹಾಗೂ ಅನುಬಂಧ-2ನ್ನು ಸಲ್ಲಿಸುವುದು.

3. ಆಯ್ಕೆಗೊಂಡ ಅಭ್ಯರ್ಥಿಗಳ ಮೂಲ ಅಂಕಪಟ್ಟಿಗಳನ್ನು ಪರಿಶೀಲಿಸಿ ದೃಢೀಕರಣ ಜೆರಾಕ್ಸ್ ಅಂಕ ಪಟ್ಟಿಗಳನ್ನು ಕಳುಹಿಸುವುದು.

4. ಇಡಿ 52 ವಿವಿಧ 99 ದಿನಾಂಕ 02-02-2000ರಲ್ಲಿನ ಸಿಬ್ಬಂದಿ ಮಾದರಿಯನ್ನು ಅನುಸರಿಸಿ ನೇಮಕಾತಿಯನ್ನು ಮಾಡತಕ್ಕದ್ದು.

5. ಸರ್ಕಾರದ ಆದೇಶ ಸಂಖ್ಯೆ ಇಡಿ 365 ವಿವಿಧ 2000 ದಿನಾಂಕ 03-02-2001ರ ಅಧಿಸೂಚನೆಯಂತೆ ಜಿಲ್ಲಾ ಸ್ಕ್ರೀನಿಂಗ ಕಮಿಟಿ ಅನುಮೋದನೆಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸುವುದು.

ನಿರ್ದೇಶಕರು [ಪ್ರೌಢ ಶಿಕ್ಷಣ]

ಪ್ರತಿಗಳನ್ನು:-

1. ರಾಜ್ಯದ ಎಲ್ಲಾ ಉಪನಿರ್ದೇಶಕರು, ಸಾ. ಶಿ. ಇ. ಇವರಿಗೆ ಮುಂದಿನ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಮಾಹಿತಿಗಾಗಿ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಮತ್ತು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

C:\My Documents\Type2 Est2 C8(1).doc